**CC 2217/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 2217/2022**

**ಸಿ ಡಬ್ಲೂ 10**

**ಪಿ ಡಬ್ಲೂಃ 6**

**ಸಾಕ್ಷಿಯ ಹೆಸರು -** **ಲಕ್ಷ್ಮಣ**
**ತಂದೆಯ ಹೆಸರು -** **ನಾಗಪ್ಪ**
**ವಯಸ್ಸು -** 51 **ವರ್ಷಗಳು**
**ಉದ್ಯೋಗ -** **ಮುಖ್ಯ ಪೇದೆ, ಗ್ರಾಮೀಣ ಪೋ. ಠಾ**
**ವಾಸಸ್ಥಳ -** **ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 21-06-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು ದಿಃ **07-04-2017** ರಿಂದ **13-06-2022** ವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ **02-07-2022** ರಂದು ಪಾದಗಟ್ಟೆ ಆಂಜನೇಯ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ರಾಜಸ್ಥಾನದ ಕನ್ನಯ್ಯ ಲಾಲ್ ಎಂಬುವವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಹೊಸಪೇಟೆಯ ಶ್ರೀ ರಾಮ ಸೇನೆ ಘಟಕದವರು ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಂಡಿದ್ದರು. ಆ ಹಿನ್ನೆಲೆಯಲ್ಲಿ ದಿಃ **01-07-2022** ರಂದು ಚಾಸಾ **-1** ರವರು ಸದರಿ ಸಂಘಟನೆಯ ಸದಸ್ಯರುಗಳನ್ನು ಠಾಣೆಗೆ ಕರೆಯಿಸಿ ಶಾಂತಿ ಸಭೆ ಮಾಡಿ ಪ್ರತಿಭಟನೆ ಮಾಡಬಹುದು, ಅಂಗಡಿಗಳನ್ನು ಬಂದ್ ಮಾಡುವಂತಿಲ್ಲ ಮತ್ತು ಸ್ಟೇಜ್ ಹಾಗೂ ಧ್ವನಿ ವರ್ಧಕಗಳನ್ನು ಅಳವಡಿಸುವಂತಿಲ್ಲ ಎಂದು ತಿಳಿಸಿದ್ದರು.

ದಿಃ **02-07-2022** ರಂದು ನಾನು ಠಾಣೆಯಲ್ಲಿದ್ದಾಗ ಚಾಸಾ **-1** ರವರು ನನಗೆ ಮತ್ತು ಚಾಸಾ **-11** ರವರಿಗೆ ಪಾದಗಟ್ಟೆ ಆಂಜನೇಯ ದೇವಸ್ಥಾದನದ ಬಳಿ ಗಲಾಟೆಯಾಗುತ್ತಿದೆ ಹೋಗಿ ಎಂದು ಬೆಳಿಗ್ಗೆ **09.30** ಗಂಟೆಗೆ ತಿಳಿಸಿದರು. ನಾವು ಸ್ಥಳಕ್ಕೆ ಹೋಗಿ ನೋಡಿದಾಗ ಸಂಚಾರಕ್ಕೆ ಅಡ್ಡಿಯಾಗಿ ಸ್ಥಳದಲ್ಲಿ ಗಲಾಟೆ ವಾತಾವರಣ ಇತ್ತು. ಆ ಸಂದರ್ಭದಲ್ಲಿ ಶ್ರೀರಾಮ ಸೇನೆಯ ಮುಖಂಡರಾದ ಆರೋಪಿತರೆಲ್ಲ ಪೋಲಿಸರೊಂದಿಗೆ ವಾಗ್ವಾದ ಮಾಡಿರುತ್ತಾರೆ. ಚಾಸಾ **-1** ರವರು ಸ್ಥಳಕ್ಕೆ ಬಂದು ಸಂಚಾರಕ್ಕೆ ಅಡ್ಡಿ ಪಡಿಸಿದ್ದರಿಂದ ಸ್ಟೇಜ್ ಮತ್ತು ಧ್ವನಿ ವರ್ಧಕಗಳನ್ನು ಸ್ಥಳದಿಂದ ತೆರವುಗೊಳಿಸಿದರು. ನಂತರ ಠಾಣೆಗೆ ಹೋಗಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ನಾನು ಈ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ **1** ರಿಂದ **3** ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. **4** ರಿಂದ **6** ನೇ ಆರೋಪಿತರು ಗೈರು ಹಾಜರು ಇದ್ದು, ಅವರ ಗುರುತಿಸುವಿಕೆಗೆ ತಕರಾರು ಇಲ್ಲಾ ಎಂದು ಅವರ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಎಸ್ ಹೆಚ್., ವಕೀಲರಿಂದ**

ನಾನು ಠಾಣೆಯಿಂದ ಕೃತ್ಯ ಸ್ಥಳಕ್ಕೆ ಮೋಟಾರ್ ಸೈಕಲ್ ನಲ್ಲಿ ಹೋಗಿರುತ್ತೇನೆ. ನನ್ನ ಹೇಳಿಕೆಯಲ್ಲಿ ನಾನು ಮೋಟಾರ್ ಸೈಕಲ್ ನಲ್ಲಿ ಹೋಗಿದ್ದೆ ಮತ್ತು ಅದರ ನೋಂದಣಿ ಸಂಖ್ಯೆ ಇದೆ ಎಂದು ಹೇಳಿ ಬರೆಸಿರುವುದಿಲ್ಲ. ಸ್ಥಳದಲ್ಲಿದ್ದ ಸ್ಟೇಜ್ ನ ಉದ್ದಗಲ ಎಷ್ಟು ಇತ್ತು ಎಂದು ಮತ್ತು ಆ ಸ್ಟೇಜ್ ಹಾಕಲು ಎಷ್ಟು ಕುಣಿಗಳನ್ನು ತೋಡಿದ್ದರು ಹಾಗೂ ಬಲೀಜ್ ಗಳನ್ನು ಹಾಕಿದ್ದರು ಎಂದು ನನಗೆ ಗೊತ್ತಿಲ್ಲ. ಸ್ಥಳದಲ್ಲಿ **200** ಜನ ಇದ್ದರು. ನನ್ನ ಹೇಳಿಕೆಯಲ್ಲಿ ಸ್ಥಳದಲ್ಲಿ **200** ಜನರು ಇದ್ದರು ಎಂದು ಹೇಳಿ ಬರೆಸಿಲ್ಲ.

**CC 2217/2022**

**ಸಿ ಡಬ್ಲ್ಯೂ 10**

**ಪಿ ಡಬ್ಲ್ಯೂ: 6**

ಸದರಿ ಕೃತ್ಯ ಸ್ಥಳ ಜನದಟ್ಟಣೆಯಿಂದ ಕೂಡಿರುವ ಸ್ಥಳ ಅಂದರೆ ಸರಿ. ಕೃತ್ಯ ಸ್ಥಳದಲ್ಲಿ **3** ದಾರಿಗಳು ಸೇರುತ್ತವೆ ಅಂದರೆ ಸರಿ. ಹೇಳಿಕೆಯಲ್ಲಿ ಸ್ಟೇಜ್ ನ್ನು ಯಾವ ಜಾಗದಲ್ಲಿ ಹಾಕಲಾಗಿದೆ ಎಂದು ನಿಖರವಾಗಿ ಹೇಳಿ ಬರೆಸಿಲ್ಲ ಅಂದರೆ ಸರಿ.

ನಾನು ಆ ದಿನ ಸ್ಥಳಕ್ಕೆ ಹೋಗಿಲ್ಲ, ಆರೋಪಿತರು ಸ್ಥಳದಲ್ಲಿ ಪ್ರತಿಭಟನೆ ಮಾಡಿಲ್ಲ, ಆರೋಪಿತರು ಯಾವುದೇ ಸ್ಟೇಜ್ ಅಥವಾ ದ್ವನಿ ವರ್ಧಕಗಳನ ್ನ ರಸ್ತೆಯಲಿ ಇಟ್ಟಿರಲಿಲ್ಲ ಅಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಯಾವ ಯಾವ ಮೇಲಾಧಿಕಾರಿಗಳು ಸ್ಥಳದಲ್ಲಿ ಇದ್ದರು ಎಂಬುದನ್ನು ಬರೆಸಿಲ್ಲ ಅಂದರೆ ಸರಿ. ಸದರಿ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ**.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.